ಶ್ರೀ ಡಿ. ಮಂಜುನಾಥ್ (ಕಾರ್ಮಿಕ ಸಚಿವರು)

ಅ) ಆಹುದು.
ಆ) ಇಲ್ಲ.
ಇ) ಪ್ರಶ್ನೆ ಉದ್ಭವಿಸುವುದಿಲ್ಲ.
ಈ) ಇಲ್ಲ.
ಉ) ಉದ್ಭವಿಸುವುದಿಲ್ಲ.

ಧಾರವಾಡ ನಗರದಲ್ಲಿರುವ ಬಸ್ಸು ನಿಲ್ದಾಣವನ್ನು ವಿಸ್ತರಿಸುವುದು

೧೮೦೪. ಶ್ರೀ ಚಂದ್ರಕಾಂತ ಬೆಲ್ಲದ್ (ಧಾರವಾಡ).—ಮಾನ್ಯ ಸಾರಿಗೆ ಮತ್ತು ವಸತಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೇ ?

ಅ) ಧಾರವಾಡದಲ್ಲಿ ಈಗಿರುವ ವಾಹನ ನಿಲ್ದಾಣ ಚಿಕ್ಕದಾಗಿರುವುದರಿಂದ ಪ್ರಯಾಸಿಗರಿಗೆ ಬಹಳ ತೊಂದರೆಯಾಗಿದೆ, ಹಾಗಿದ್ದಲ್ಲಿ ಇದನ್ನು ವಿಸ್ತಾರಪಡಿಸುವ ಆಗತ್ಯತೆ ಸರ್ಕಾರದ ಗಮನದಲ್ಲಿದೆಯೇ ?

ಆ) ವಾಹನ ನಿಲ್ದಾಣದ ಪಕ್ಕದಲ್ಲಿ ಸಾಕಷ್ಟು ವಿಸ್ತಾರವಾದ ಬಯಲು ಪ್ರದೇಶವಿದ್ದು, ಅದನ್ನು ಪಡೆದು ನಿಲ್ದಾಣವನ್ನು ವಿಸ್ತರಿಸಲಾಗುವುದೇ ?

ಶ್ರೀ ಪಿ. ಜಿ. ಆರ್. ಸಿಂಧ್ಯಾ (ಸಾರಿಗೆ ಹಾಗೂ ವಸತಿ ರಾಜ್ಯ ಮಂತ್ರಿಗಳು).—

ಅ) ಇದೆ.

ಆ) ಧಾರವಾಡ ಕೇಂದ್ರ ಬಸ್ ನಿಲ್ದಾಣದ ಹಿಂಭಾಗದಲ್ಲಿರುವ ಜಮೀನನ್ನು ಸ್ವಾಧೀನಪಡಿಸಿಕೊಂಡು ಹಾಲಿ ಇರುವ ಬಸ್ ನಿಲ್ದಾಣವನ್ನು ವಿಸ್ತರಿಸಲು ಪ್ರಯತ್ನವನ್ನು ಮಾಡಲಾಗುತ್ತಿದೆ.

ದಾವಣಗೆರೆ ನಗರಸಭೆಯಿಂದ ವಿದ್ಯುತ್ ಹಣ ಬಾಕಿಯ ಬಗ್ಗೆ

೧೬೮೭. ಶ್ರೀ ಬಿ. ಜಿ. ಕೊಟ್ರಪ್ಪ (ಹರಿಹರ).—ಮಾನ್ಯ ನಗರಾಭಿವೃದ್ಧಿ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ದಾವಣಗೆರೆ ನಗರಸಭೆಯವರು ಹರಿಹರದಲ್ಲಿರುವ ತಮ್ಮ ವಾಟರ್ ವರ್ಕ್ಸ್ ಬಗ್ಗೆ ವಿದ್ಯುಚ್ಛಕ್ತಿ ಇಲಾಖೆಗೆ ಕಟ್ಟಬೇಕಾಗಿದ್ದ ೩ ಲಕ್ಷ ರೂಪಾಯಿಗಳನ್ನು ಹರಿಹರ ಟೌನ್ ಪುರಸಭೆಯವರಿಂದ ವಸೂಲ್ ಮಾಡಿಕೊಂಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ, ದಾವಣಗೆರೆ ನಗರಸಭೆಯವರಿಂದ ಆ ಹಣವನ್ನು ವಸೂಲಿ ಮಾಡಿಕೊಂಡು ಹರಿಹರ ಪುರಸಭೆಗೆ ವಾಪಸ್ಸು ಕೊಡಿಸಲು ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದಾರೆ ?

ಇ) ದಾವಣಗೆರೆ ನಗರಸಭೆಯವರಿಗೆ ಕೊಡುತ್ತಿರುವ ಅನುದಾನದಲ್ಲಿ ಸದರಿ ೩ ಲಕ್ಷ ರೂ. ಹಣವನ್ನು ಮುರಿದುಕೊಂಡು ಅದನ್ನು ಹರಿಹರ ಪುರಸಭೆಗೆ ಕೊಡಲು ಸರ್ಕಾರದವರು ಕ್ರಮ ಕೈಕೊಳ್ಳುವರೆ ?

ಈ) ಈ ರೀತಿ ೩ ಲಕ್ಷ ರೂಪಾಯಿಗಳನ್ನು ತಪ್ಪು ಮಾಹಿತಿಯಿಂದ ಮುರಿದುಕೊಂಡು ಎಷ್ಟು ವರ್ಷಗಳಾಯಿತು ?

ಉ) ಹರಿಹರದಂಥ ಸಣ್ಣ ಪುರಸಭೆಯಿಂದ ೩ ಲಕ್ಷ ರೂಪಾಯಿ ತಪ್ಪು ಮಾಹಿತಿಯಿಂದ ಮುರಿದುಕೊಂಡಿದ್ದರಿಂದ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಊ) ಹರಿಹರ ಪುರಸಭೆ ಮತ್ತು ದಾವಣಗೆರೆ ನಗರಸಭೆಗಳ ಈ ಸಮಸ್ಯೆಯನ್ನು ೧೯೮೬ನೇ ಮಾರ್ಚ್ ತಿಂಗಳೊಳಗೆ ಬಗೆಹರಿಸಲು ಸರ್ಕಾರದವರು ಪ್ರಯತ್ನಿಸುವರೆ ?

ಶ್ರೀ ಎ. ಲಕ್ಷ್ಮಿಸಾಗರ್ (ನಗರಾಭಿವೃದ್ಧಿ, ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು).—

ಅ) ಬಂದಿದೆ.

ಆ) ಮತ್ತು ಇ) ದಾವಣಗೆರೆ ನಗರಸಭೆಗೆ ಬಿಡುಗಡೆ ಮಾಡಬೇಕಾಗಿರುವ ಆಕ್ಟ್ರಾಯಿ ಪರಿಹಾರ ಅನುದಾನದಲ್ಲಿ ಇದನ್ನು ಮುರಿದುಕೊಂಡು ಹರಿಹರ ಪುರಸಭೆಗೆ ನೀಡಲಾಗುತ್ತಿದೆ.

ಈ) ಗೌ–ಟಿ–ರಿಶಿರ ಆದೇಶದಲ್ಲಿ ಮುರಿದು ಕೊಳ್ಳಲಾಗಿತ್ತು.

ಉ) ಇಲ್ಲ.

ಊ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಹುಡ್ಕೋ ಯೋಜನೆ

೧೯೯೧. ಶ್ರೀ ಗೋಪಾಲಮಂಕಂದ ಕಾನಡೆ (ಸಿರ್ಸಿ).—ಮಾನ್ಯ ಸಾರಿಗೆ ಹಾಗೂ ವಸತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಹುಡ್ಕೋ ಯೋಜನೆ ಯಡಿಯಲ್ಲಿ ಆದಾಯದ ಪ್ರಮಾಣ ಪತ್ರದ ಆಧಾರದ ಮೇಲೆ ಮನೆಗಳನ್ನು ನೀಡುತ್ತಿರುವುದು ನಿಜವೇ ?

ಆ) ಹಾಗಿದ್ದಲ್ಲಿ ನಿಗಧಿ ಮಾಡಿರುವ ಆದಾಯದ ಪ್ರಮಾಣವೆಷ್ಟು ?

ಇ) ೨,೦೦೦ ರೂಗಳಿಂದ ೬,೦೦೦ ರೂ.ಗಳವರೆಗೆ ವಾರ್ಷಿಕ ಆದಾಯ ಇರುವವರಿಗೆ ಸದರಿ ಮನೆಗಳನ್ನು ಕೊಡಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಸಾರಿಗೆ ಹಾಗೂ ವಸತಿ ರಾಜ್ಯ ಮಂತ್ರಿಗಳು).—

ಅ) ಹೌದು.

ಆ) ವಾರ್ಷಿಕ ಆದಾಯದ ಪ್ರಮಾಣ.—
ಆರ್ಥಿಕ ದುರ್ಬಲ ವರ್ಗ
ಕಡಿಮೆ ಆದಾಯ ವರ್ಗ ೭,೨೦೦ ರೂ.ಗಳವರೆಗೆ
ಮಧ್ಯಮ ಆದಾಯ ವರ್ಗ ೭,೨೦೧ ರಿಂದ ೧೮,೦೦೦ರವರೆಗೆ
ಹೆಚ್ಚಿನ ಆದಾಯ ವರ್ಗ ೧೮,೦೦೧ ರಿಂದ ೫೦,೦೦೦ರವರೆಗೆ

ಇ) ಈಗಾಗಲೇ ಅವಕಾಶವಿದೆ.

ಕೈಮಗ್ಗ ಅಭಿವೃದ್ಧಿಗಾಗಿ ಪ್ರತ್ಯೇಕವಾದ ಒಂದು ನಿರ್ದೇಶನಾಲಯವನ್ನು ರಚಿಸುವ ಯೋಜನೆ ಬಗ್ಗೆ.

೧೯೫೪. ಶ್ರೀ ಎಸ್. ಜಿ. ನಂಜಯ್ಯನ ಮಠ್ (ಗುಳೇದಗುಡ್ಡ).—ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೈಮಗ್ಗದ ಅಭಿವೃದ್ಧಿಗಾಗಿ ಪ್ರತ್ಯೇಕವಾದ ಒಂದು ನಿರ್ದೇಶನಾಲಯವನ್ನು ರಚಿಸುವ ಯೋಜನೆ ಸರ್ಕಾರದವರ ಗಮನದಲ್ಲಿದೆಯೇ ?

ಆ) ಹಾಗಿದ್ದಲ್ಲಿ ಅದನ್ನು ಯಾವಾಗ ರಚಿಸಲಾಗುವುದು ?

ಶ್ರೀ ಆರ್. ವಿ. ದೇಶಪಾಂಡೆ (ಸಣ್ಣ ಪ್ರಮಾಣದ ರಾಜ್ಯ ಕೈಗಾರಿಕಾ ಮಂತ್ರಿಗಳು).—

ಅ) ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಪರಿಶೀಲನೆಯಲ್ಲಿದ್ದ್ದರಿಂದ ಪ್ರಶ್ನೆ ಉದ್ಭವಿಸುವುದಿಲ್ಲ.